ಅ) ಬೆಂಗಳೂರು ನಗರದ ಎಲ್ಲಾ ರಸ್ತೆ ಬದಿಯ ಮಳೆ ನೀರು ಹರಿಯುವ ಚರಂಡಿಗಳಲ್ಲಿ ಹೂಳು ತುಂಬಿರುವುದರಿಂದ ಮಳೆ ನೀರು ಸಂಪೂರ್ಣವಾಗಿ ರಸ್ತೆಗಳ ಮೇಲೆ ಹರಿಯುತ್ತಿರುವುದು ಮತ್ತು ರಸ್ತೆ ಬದಿಯ ಕಟ್ಟಡಗಳಿಗೆ ನುಗ್ಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿ) :

ಅ) ಹೌದು

ಆ) ತಗ್ಗು ಪ್ರದೇಶಗಳಲ್ಲಿ ಮಳೆಗಾಲಕ್ಕೆ ಮುನ್ನ, ಹೂಳು ತುಂಬಿರುವ ರಸ್ತೆಬದಿಯ ಚರಂಡಿಗಳು, ಶೋಲ್ಡರ್ ಡ್ರೈನ್‌ಗಳನ್ನು ಸ್ವಚ್ಛಗೊಳಿಸುವ ಕಾಮಗಾರಿಯನ್ನು ಕೈಗೆತ್ತಿಕೊಂಡು ಮಳೆ ನೀರು ಸರಾಗವಾಗಿ ಹರಿಯಲು ಅನುವು ಮಾಡಿಕೊಡಲಾಗುತ್ತಿದೆ.

1930 (1868) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) :- ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಸಂಚಾರ ಸುಧಾರಣೆಗೆ ಸರ್ಕಾರವು ಹಮ್ಮಿಕೊಂಡಿರುವ "ಬಿ ಟ್ರ್ಯಾಕ್ 2010" ಯೋಜನೆ ಅಂಶಗಳೇನು;

ಆ) ಈ ಯೋಜನೆಯಿಂದ ಸಂಚಾರ ನಿರ್ವಹಣೆಗೆ ಯಾವ ರೀತಿ ಸಹಾಯವಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳಲ್ಲಿ ಬೆಂಗಳೂರು ನಗರ ಸಂಚಾರ ವ್ಯವಸ್ಥೆಯ ಅಭಿವೃದ್ಧಿಗೆ ಬಿ-ಟ್ರಾಕ್ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಇದರ ರೂಪು-ರೇಶೆಗಳು ಕೆಳಕಂಡಂತೆ ಇರುತ್ತದೆ.

"ಬಿ-ಟ್ರಾಕ್ 2010"

ಹಿನ್ನೆಲೆ :

ಬೆಂಗಳೂರು ನಗರವು ವಾಹನ ಸಂಖ್ಯೆ ಹೆಚ್ಚಳದಲ್ಲಿ ಐತಿಹಾಸಿಕ ಬೆಳವಣಿಗೆಯನ್ನು ಕಂಡಿದೆ. ಇದರ ಪರಿಣಾಮವಾಗಿ ಬಹಳಷ್ಟು ಆರ್ಟೀರಿಯಲ್ ರಸ್ತೆಗಳು ಮತ್ತು ರಸ್ತೆ ಕೂಡು ಸ್ಥಳಗಳು ಶಕ್ತಿ ಮೀರಿ ನಿರ್ವಹಣೆಯಾಗುತ್ತಿವೆ (ವಿ/ಸಿ 1 ಕ್ಕಿಂತ ಹೆಚ್ಚಾಗಿರುತ್ತವೆ).

ಕೇಂದ್ರ ಪ್ರದೇಶದ ಕೆಲವು ಪ್ರಮುಖ ರಸ್ತೆಗಳಲ್ಲಿ ಸಂಚಾರ ದಟ್ಟಣೆಯ ಅವಧಿಯಲ್ಲಿ ಸರಾಸರಿ ಪ್ರಯಾಣದ ವೇಗವು 10 ಕೆಎಂಪಿಹೆಚ್‌ಗೂ ಕಡಿಮೆ ಇರುತ್ತದೆ. ಆದ್ದರಿಂದ ಬೆಂಗಳೂರಿನಲ್ಲಿ ಪರಿಣಾಮಕಾರಿ ಸಂಚಾರ ನಿರ್ವಹಣಾ ಯೋಜನೆಗಳನ್ನು ಪರಿಕಲ್ಪಿಸುವುದು ಅವಶ್ಯಕವಾಗಿದೆ. ಈ ದಿಸೆಯಲ್ಲಿ ಬೆಂಗಳೂರು ನಗರ ಪೊಲೀಸರು "ಬೆಂಗಳೂರು ಟ್ರಾಫಿಕ್ ಇಂಪ್ರೂವ್‌ಮೆಂಟ್ ಪ್ರಾಜೆಕ್ಟ್–ಬಿ ಟ್ರಾಕ್ 2010" ಯೋಜನೆಯನ್ನು ಪರಿಕಲ್ಪಿಸಿದ್ದಾರೆ.

ಧ್ಯೇಯ ಮತ್ತು ಗುರಿ :

"ಬಿ ಟ್ರಾಕ್ 2010" ರ ಧ್ಯೇಯವು ಎರಡು ವಿಭಾಗಗಳಾಗಿದ್ದು :

1. **ನಿರ್ವಹಣಾ (ಕಾರ್ಯಕಾರಿ) ಧ್ಯೇಯಗಳು :–**

(ಅ) ಬೆಂಗಳೂರು ನಗರದ ಕೇಂದ್ರ ಪ್ರದೇಶದಲ್ಲಿ ಸಂಚಾರ ಒತ್ತಡವನ್ನು ಶೇಕಡ 30 ರಷ್ಟು ತಗ್ಗಿಸುವುದು.

(ಆ) ಬೆಂಗಳೂರು ನಗರದಲ್ಲಿ ರಸ್ತೆ ಅಪಘಾತಗಳನ್ನು ಶೇಕಡ 30 ರಷ್ಟು ತಗ್ಗಿಸುವುದು.

(ಇ) ಮಾಲಿನ್ಯ ತಡೆಗಟ್ಟುವುದಲ್ಲಿ ಗಮನಾರ್ಹ ಸಾಧನೆಗೈಯ್ಯುವುದು.

(ಈ) ಸಂಚಾರ ಕಾಯ್ದೆಗಳು ಮತ್ತು ನಿಯಮಗಳ ಪರಿಪಾಲನೆಯಲ್ಲಿ ಗಮನಾರ್ಹ ಸಾಧನೆ.

(ಉ) ಪರಿಣಾಮಕಾರಿ (ಅಪಘಾತದಿಂದಾದ) ನೋವು ಪರಿಹಾರ ವ್ಯವಸ್ಥೆಯ ಸ್ಥಾಪನೆ.

2. **ಸಾಂಸ್ಥಿಕ ಧ್ಯೇಯಗಳು :–**

(ಅ) ಪೂರಕ ಸಹಕಾರಿ ಸಂಚಾರ ನಿರ್ವಹಣೆಗೆ ಸಂಬಂಧಪಟ್ಟ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವುದು ಉದಾ :– ಟ್ರಾಫಿಕ್ ಟಾಸ್ಕ್ ಫೋರ್ಸ್ ಸಂಸ್ಥೆ ಸ್ಥಾಪನೆ, ರಸ್ತೆ ಸುರಕ್ಷತಾ ಸಮಿತಿ ಸ್ಥಾಪನೆ, ಸಂಚಾರ ಕಾರ್ಯ ಜಾರಿ ಕ್ರಮಗಳ ಸಮಿತಿ ಸ್ಥಾಪನೆ ಮುಂತಾದವುಗಳು.

(ಆ) ಸುಭದ್ರ ಆದಾಯ (ರೆವಿನ್ಯೂ) ಮಾದರಿ (ಸಂಚಾರ ಮೂಲಭೂತ ನಿರ್ವಹಣೆಯನ್ನು ಮತ್ತು ಅಭಿವೃದ್ಧಿಗಳಿಗಾಗಿ ಸಂಚಾರ ನಿಧಿಯಿಂದ ಹಣ ಒದಗಿಸುವುದು)

(ಇ) ಕಾನೂನು ಮತ್ತು ಸಂಸ್ಥೆಗಳ ಪುನಶ್ಚೇತನ

(ಈ) ಸಾಮರ್ಥ್ಯ ನಿರ್ಮಾಣ (ಸಂಚಾರ ತರಬೇತಿ ಸಂಸ್ಥೆಯನ್ನು ಆಧುನೀಕರಣಗೊಳಿಸುವುದು ಮತ್ತು ಮೇಲ್ದರ್ಜೆಗೇರಿಸುವುದು ಇತ್ಯಾದಿ) ಮತ್ತು ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರನ್ನು ಹೆಚ್ಚಳಗೊಳಿಸಿ ಸಂಚಾರ ಪೊಲೀಸರನ್ನು ಬಲಿಷ್ಠಗೊಳಿಸುವುದು, ಅವಶ್ಯಕ ಕಟ್ಟಡಗಳ ನಿರ್ಮಾಣ ಹಾಗೂ ಆಧುನಿಕ ಸಂಪರ್ಕ ಮತ್ತು ಸಂಚಾರ ವ್ಯವಸ್ಥೆಯನ್ನು ಒದಗಿಸುವುದು.

ಮಾರ್ಗಸೂಚಿ :

ಬೆಂಗಳೂರು ನಗರಕ್ಕೆ ಪೂರಕ ಅಂಶಗಳನ್ನು ಒದಗಿಸುವುದಷ್ಟೇ ಅಲ್ಲದೆ, ಬೇಡಿಕೆಗಳು (ಒತ್ತಾಯಗಳನ್ನು ಒಳಗೊಂಡಂತೆ) ಇರುವಂತಹ ಒಂದು ಸಂಚಾರ ಯೋಜನಾ ನಿರ್ವಹಣೆ ಅವಶ್ಯಕವಾಗಿದ್ದು "ಬಿ ಟ್ರಾಕ್ 2010" ಇದೇ ಮಾರ್ಗಸೂಚಿಯನ್ನು ಅಳವಡಿಸಿಕೊಂಡಿರುತ್ತದೆ.

ನಿಲುವುಗಳು :

"ಬಿ ಟ್ರಾಕ್ 2010" ರ ಚೌಕಟ್ಟು ಈ ಕೆಳಕಂಡಿರುತ್ತದೆ.

(ಅ) ಭೂ ಅಭಿವೃದ್ಧಿ ಹಾಗೂ ಉಪಯೋಗ ನಿಯಂತ್ರಣಗಳು

(ಆ) ಸಾರ್ವಜನಿಕ ಸಾರಿಗೆಗೆ ಪ್ರಧಾನ ಆದ್ಯತೆ

(ಇ) ನಿಲುಗಡೆ ನಿಯಂತ್ರಣ ಮತ್ತು ನಿರ್ವಹಣೆ

(ಈ) ಸ್ವಯಂಚಾಲಿತ ನಿಯಂತ್ರಣ ಜಾರಿ ಕೇಂದ್ರ (ಐಟಿಎಸ್/ಎಟಿಸಿ)

(ಉ) ಕೇಂದ್ರ ಪ್ರದೇಶಕ್ಕೆ ಪ್ರವೇಶ ನಿರ್ಬಂಧ ಹಾಗೂ

(ಊ) ಅಪಘಾತ ತಗ್ಗಿಸಲು ರಸ್ತೆ ಸುರಕ್ಷತಾ ಯೋಜನೆಗಳು

ನಿಲುವುಗಳು ನಿರ್ದಿಷ್ಟ ವಸ್ತು ವಿಷಯಗಳೆಂದರೆ :

(ಅ) ಕೇಂದ್ರ ಪ್ರದೇಶದ – ಪ್ರದೇಶ ಸಂಚಾರ ನಿಯಂತ್ರಣ ವ್ಯವಸ್ಥೆ, ಏಕಮುಖ ಸಂಚಾರದ ವ್ಯವಸ್ಥೆ, ನಿರ್ದಿಷ್ಟ ಬಸ್ ಲೇನ್‌ಗಳ ಹಾಗೂ ಬಸ್‌ಗಳಿಗೆ ಸಿಗ್ನಲ್‌ಗಳಲ್ಲಿ ಆದ್ಯತೆ, ನಿಲುಗಡೆ ನಿಯಂತ್ರಣಗಳು, ಅಟೋರಿಕ್ಷಾ ರಹಿತ ವಲಯಗಳ ಸೃಷ್ಟಿ, ಕೇಂದ್ರ ನಿಬಿಡ ಪ್ರದೇಶಕ್ಕೆ ಸಂಚಾರ ಪ್ರವೇಶ ನಿರ್ಬಂಧ.

(ಆ) ಅನಿರ್ಭಾದಿತ ಸಂಚಾರ ಸಾಗುವಿಕೆಗಾಗಿ ಕೋರ್ ರಿಂಗ್ ರಸ್ತೆ ಅಭಿವೃದ್ಧಿ, ಇದರಿಂದಾಗಿ ಕೇಂದ್ರ ಪ್ರದೇಶದೊಳಕ್ಕೆ ಪ್ರವೇಶವನ್ನು ತಪ್ಪಿಸುವುದು.

(ಇ) ಕೆಲವು ರೇಡಿಯಲ್ ರಸ್ತೆಗಳಿಗೆ ಕಾರಿಡಾರ್ ಟ್ರಾಫಿಕ್ ಕಂಟ್ರೋಲ್ ಸಿಸ್ಟಮ್ (ಎಟಿಸಿ ತರಹ) ಮಧ್ಯಂತರದ, ಹೊರ ವರ್ತುಲ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವುದು ಹಾಗೂ ಪರಿದಿ ಹೊರ ವರ್ತುಲ ರಸ್ತೆಯ ಅಭಿವೃದ್ಧಿ.

(ಈ) ಸಂಪರ್ಕ, ಗಣಕೀಕರಣ, ಸಾರಿಗೆ ವ್ಯವಸ್ಥೆ, ಸಾಮರ್ಥ್ಯ ನಿರ್ಮಾಣ ಹಾಗೂ ಸ್ವಯಂ ಚಾಲಿತ ಜಾರಿ ಕೇಂದ್ರಗಳ ಅಭಿವೃದ್ಧಿಯೊಂದಿಗೆ ಸಂಚಾರ ಪೊಲೀಸ್‌ನ ಆಧುನೀಕರಣ

(ಕೋಟಿ ರೂ.ಗಳಲ್ಲಿ)

ವಿಷಯಗಳು	2006–07	2007–08	2008–09	2009–10	2010–11	ಒಟ್ಟು ಮೊತ್ತ
ಜಂಕ್ಷನ್ ಅಭಿವೃದ್ಧಿಗಳು	2.00	7.00	7.00	7.00	7.00	30.00
ರಸ್ತೆ ಸೌಲಭ್ಯ, ರಸ್ತೆ ಸೌಕರ್ಯಗಳು, ರಸ್ತೆ ಗುರುತುಗಳು,	5.00	23.75	23.75	23.75	23.75	100.00
ಇಂಟೆಲಿಜೆಂಟ್ ಟ್ರಾನ್ಸ್‌ಪೋರ್ಟ್ ಸಿಸ್ಟಂ	30.00	30.00	30.00	30.00	30.00	150.00
ಸರ್ವೈಲೆನ್ಸ್/ ಮಾನಿಟರಿಂಗ್ ಹಾಗೂ ಎನ್‌ಫೋರ್ಸ್‌ಮೆಂಟ್ ಕ್ಯಾಮೆರಾಗಳು ಇತ್ಯಾದಿ	5.00	11.25	11.25	11.25	11.25	50.00
ಶಿಕ್ಷಣ ಮತ್ತು ತರಬೇತಿ ಮತ್ತಿತರೆ	2.00	4.5	4.5	4.5	4.5	20.00
ಒಟ್ಟು ಮೊತ್ತ	**44.00**	**76.5**	**76.5**	**76.5**	**76.5**	**350.00**

2006–07ಕ್ಕೆ ಕಾರ್ಯಕ್ರಮಗಳು :

ಹಣಕಾಸು ವರ್ಷ 2006–07ಕ್ಕೆ ಈ ಕೆಳಕಂಡ ಚಟುವಟಿಕೆಗಳಿಗಾಗಿ ಯೋಜನಾ ವೆಚ್ಚವು ಸುಮಾರು ರೂ.44.00 ಕೋಟಿಗಳಾಗಲಿದೆ.

1. ರೂ.30.00 ಕೋಟಿ ವೆಚ್ಚದಲ್ಲಿ 125 ಸಿಗ್ನಲ್‌ಗಳು ಹಾಗೂ 50 ವಿಎಂಎಸ್ ಸ್ಥಳಗಳಿಗೆ ಎಟಿಸಿ ಪ್ರದೇಶ ಸಂಚಾರ ನಿಯಂತ್ರಣವನ್ನೊಳಗೊಂಡಂತೆ ಇಂಟೆಲಿಜೆಂಟ್ ಟ್ರಾನ್ಸ್‌ಪೋರ್ಟೇಷನ್ ಸಿಸ್ಟಮ್, ವೇರಿಯಬಲ್ ಮೆಸೇಜ್ ಸಿಸ್ಟಮ್ (ವಿಎಂಎಸ್) ಸಂಚಾರ ನಿರ್ದೇಶನ ಕೇಂದ್ರ ಇತ್ಯಾದಿ.

2. ರೂ.5.00 ಕೋಟಿ ವೆಚ್ಚದಲ್ಲಿ ಸ್ವಯಂಚಾಲಿತ ಜಾರಿ ಕೇಂದ್ರದ ಅಭಿವೃದ್ಧಿ ಹಾಗೂ ಸಂಚಾರ ಬೇಹುಗಾರಿಕೆ ನಿರ್ವಹಣೆ ಮತ್ತು ಕ್ಯಾಮೆರಾಗಳ ಮುಖಾಂತರ ಜಾರಿ ಕ್ರಮಗಳು, ಸ್ಪೀಡ್ ಕ್ಯಾಮೆರಾಗಳು ಇತ್ಯಾದಿ.

3. ರೂ.5.00 ಕೋಟಿ ವೆಚ್ಚದಲ್ಲಿ, ರಸ್ತೆ ಉಪಕರಣಗಳಿಗೆ (ಫಲಕಗಳು, ಮಾರ್ಗಸೂಚಿ ಬೃಹತ್ ಫಲಕಗಳು ಇತ್ಯಾದಿ) ಹಾಗೂ ರಸ್ತೆಗಳಿಗೆ ಬಣ್ಣ ಬಳಿಯುವುದು.

4. ರೂ. 2.00 ಕೋಟಿ ವೆಚ್ಚದಲ್ಲಿ, ಸುಗಮ ಸಂಚಾರಕ್ಕಾಗಿ ರಸ್ತೆ ಜಂಕ್ಷನ್‌ಗಳ ಕಿರು ಅಭಿವೃದ್ಧಿ.

5. ರೂ.2.00 ಕೋಟಿ ವೆಚ್ಚದಲ್ಲಿ, ಸಂಚಾರ ಮತ್ತು ರಸ್ತೆ ಸುರಕ್ಷತೆ ಶಿಕ್ಷಣ ಹಾಗೂ ತರಬೇತಿ ಚಟುವಟಿಕೆಗಳು.

ಆ) ಈ ಯೋಜನೆಯಿಂದ ಸಂಚಾರ ನಿರ್ವಹಣೆಗೆ ಕೆಳಕಂಡಂತೆ ಪ್ರಯೋಜನವಾಗಲಿದೆ.

(ಅ) ಬೆಂಗಳೂರು ನಗರದ ಕೇಂದ್ರ ಪ್ರದೇಶದಲ್ಲಿ ಶೇಕಡ ಒತ್ತಡವು 30 ರಷ್ಟು ತಗ್ಗಲಿದೆ.

(ಆ) ಬೆಂಗಳೂರು ನಗರದಲ್ಲಿ ರಸ್ತೆ ಅಪಘಾತಗಳು ಶೇಕಡ 30 ರಷ್ಟು ತಗ್ಗಲಿದೆ.

(ಇ) ಮಾಲಿನ್ಯ ತಡೆಗಟ್ಟುವುದರಲ್ಲಿ ಗಮನಾರ್ಹ ಸಾಧನೆಯಾಗಲಿದೆ.

(ಈ) ಸಂಚಾರ ಕಾಯ್ದೆಗಳು ಮತ್ತು ನಿಯಮಗಳ ಪರಿಪಾಲನೆಯಲ್ಲಿ ಗಮನಾರ್ಹ ಸಾಧನೆಯಾಗಲಿದೆ.

(ಉ) ಪರಿಣಾಮಕಾರಿ (ಅಪಘಾತದಿಂದಾದ) ನೋವು ಪರಿಹಾರ ವ್ಯವಸ್ಥೆಯ ಸ್ಥಾಪನೆಯಾಗಲಿದೆ.

(ಖ) ಪೂರಕ ಸಹಕಾರಿ ಸಂಚಾರ ನಿರ್ವಹಣೆ ಸಾಧನೆ ಆಗಲಿದೆ. ಸಂಚಾರ ಮತ್ತು ರಸ್ತೆ ಸುರಕ್ಷತೆ ಬಗ್ಗೆ ಅರಿವು ಹೆಚ್ಚಳಗೊಂಡು ತಿಳುವಳಿಕೆ ಮಟ್ಟ ಹೆಚ್ಚಲಿದೆ.

(ಎ) ಕೌಶಲ್ಯಪೂರ್ಣ ಸಂಚಾರ ಪೊಲೀಸ್ ಕರ್ತವ್ಯ ಹಾಗೂ ನಿಯಂತ್ರಣದಿಂದಾಗಿ ಗಮನಾರ್ಹ ಕಾರ್ಯಪಾಲನೆಗೆ ನಾಂದಿಯಾಗಲಿದೆ.

ನಮ್ಮ ಸಂದರ್ಭಕ್ಕೆ ಸರಿಹೊಂದುವಂತಹ ಅತ್ಯಾಧುನಿಕ ಸಂಚಾರ ನಿರ್ವಹಣಾ ತಂತ್ರಜ್ಞಾನ ಮತ್ತು ತಂತ್ರಗಾರಿಕೆಗಳನ್ನು ಅಳವಡಿಸಿಕೊಂಡು ಒತ್ತಡ, ಸುರಕ್ಷತೆ ಇತ್ಯಾದಿ ಸಂಚಾರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ "ಬಿ ಟ್ರಾಕ್ 2010" ಯೋಜನೆಯು ರಾಷ್ಟ್ರದಲ್ಲೇ ಪ್ರಪ್ರಥಮವಾಗಿರುತ್ತದೆ. ಬೆಂಗಳೂರು ನಗರದ ಸಂಚಾರ ಮತ್ತು ಸಾರಿಗೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವಲ್ಲೆ ಬೃಹತ್ ಮೂಲಭೂತ ಸೌಕರ್ಯಗಳ ಯೋಜನೆ ಮತ್ತು ಕಾರ್ಯಕಾರಿ ಕಾರ್ಯಕ್ರಮಗಳಿಗೆ ಇದು ಇಂಬು ನೀಡಲಿದೆ.

1931 (2375) ಶ್ರೀ ಕೃಷ್ಣಪಾಲೇಮಾರ್ ಜೆ. (ಸುರತ್ಕಲ್) :– ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಬೇಹುಗಾರಿಕೆ ದಳದ ಬಲವರ್ಧನೆಗಾಗಿ ಸರ್ಕಾರದ ಯೋಜನೆಗಳೇನು;

ಆ) ಆಧುನಿಕ ತಂತ್ರಜ್ಞಾನದ ಉಪಕರಣಗಳ ಬಳಕೆ ಮತ್ತು ಸಮರ್ಪಕ ಸಿಬ್ಬಂದಿ ವರ್ಗದವರನ್ನು ಒದಗಿಸಿಕೊಡುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಆಧುನಿಕ ತಂತ್ರಜ್ಞಾನದ ತರಬೇತಿ ನೀಡಿ ಆ ಮೂಲಕ ಬೇಹುಗಾರಿಕೆ ದಳಕ್ಕೆ ಶಕ್ತಿ ನೀಡುವ ಕುರಿತು ಕ್ರಮ ಜರುಗಿಸಲಾಗುವುದೇ;

ಈ) ಬೇಹುಗಾರಿಕೆ ದಳವನ್ನು ಬಲಪಡಿಸುವ ಕುರಿತಾದ ಪ್ರಸ್ತಾವನೆಗಳನ್ನು ಪುರಸ್ಕರಿಸಲು ಸರ್ಕಾರ ಕೈಗೊಳ್ಳಲಿರುವ ಸಕಾಲಿಕ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ರಾಜ್ಯ ಬೇಹುಗಾರಿಕೆ ದಳದ ಬಲವರ್ಧನೆಗಾಗಿ ಸರ್ಕಾರದ ಆದೇಶ ಸಂಖ್ಯೆ ಹೆಚ್‌ಡಿ: 226:ಪಿಒಪಿ:2005 ದಿನಾಂಕ : 22/07/2006 ರಲ್ಲಿ ಸಿಬ್ಬಂದಿಗಳನ್ನು ಸೃಜಿಸಲು ಮಂಜೂರಾತಿ ನೀಡಲಾಗಿದೆ.